# ಡೆವಿಲ್ ಬರ್ಡ್



**ಕಾಡು ಸುತ್ತುವ ಉಮೇದಿಯ ಯುವಕನೊಬ್ಬ ಕಾಡಿನ ವಿಶೇಷ ವ್ಯಕ್ತಿಯ ಚಿತ್ರ ಸೆರೆಹಿಡಿದ ಅನುಭವ ಕಥನ.**

■ ಚಿತ್ರ-ಲೇಖನ:
**ಸುನೀಲ್ ಸಾಚಿ**
ಚಿಕ್ಕಮಗಳೂರು

ಡಿಸೆಂಬರ್ ಚಳಿಯ ಒಂದು ದಿನ ನನ್ನ ಗುರು ಮತ್ತು ಖ್ಯಾತ ಉರಗತಜ್ಞ ಸತೀಶ್ ಸರ್ ಜತೆ ತಿಥಿಮತಿ ಅರಣ್ಯಕ್ಕೆ ನುಗ್ಗುವ ನಿರ್ಧಾರ ಕೈಗೊಂಡೆ.

ಅರಣ್ಯ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡು, ಕೂರ್ಗ್ ಅಡ್ವೆಂಚರ್ ಕ್ಲಬ್‌ಗೆ ಕೆಲಸ ಮಾಡುವ ಚೆಂಗಪ್ಪ ಅವರ ಜೀಪು ಹತ್ತಿಕೊಂಡೆವು. ಚೆಂಗಪ್ಪ ಕಾಡಿನಲ್ಲೂ ಶರವೇಗದಲ್ಲಿ ಜೀಪು ಓಡಿಸುವುದಕ್ಕೆ ಹೆಸರುವಾಸಿ. ರಾತ್ರಿ ಊಟದ ನಂತರ 9.30ರ ಸುಮಾರಿಗೆ ಕಾಡು ಹೊಕ್ಕೆವು. ಅಲ್ಲಿನ ರಾತ್ರಿ ಬದುಕನ್ನು ಹತ್ತಿರದಿಂದ ಕಾಣುವ ಬಯಕೆ ನಮ್ಮದಾಗಿತ್ತು. ನಮ್ಮೊಂದಿಗೆ ಮತ್ತೊಂದು ಜೀಪು ಅದರಲ್ಲೊಂದಿಷ್ಟು ಮಂದಿ ಇದ್ದರು. ನಾವಿಷ್ಟೇ ಇಡೀ ಕಾಡಿಗೆ ಅಪರಿಚಿತ ಜೀವಿಗಳು! ನಮ್ಮೊಂದಿಗೇ ಇನ್ನೂ ಒಂದಷ್ಟು ವಿಶೇಷ ಅತಿಥಿಗಳಿದ್ದರು. ಯಾರ್‍ಯಾರು ಗೊತ್ತೆ? ಇಂಡಿಯನ್ ಕೋಬ್ರಾ, ರಸ್ಸೆಲ್ಸ್ ವೈಪರ್, ಕ್ಯಾಟ್ ಸ್ನೇಕ್, ನೀರ ಹಾವು ...

ಯಾರ್‍ಯಾರದೋ ಕೈಗೆ ಸಿಕ್ಕಿ ಶಿವನ ಪಾದ ಸೇರಬಹುದಾಗಿದ್ದ ಈ ಜೀವಗಳನ್ನು ರಕ್ಷಿಸಿ ಕಾಡಿಗೆ ಬಿಡಲು ಜತೆ ಕರೆತಂದಿದ್ದೆವು. ಅವುಗಳನ್ನು ಕಾಡಿಗೆ ಬೀಳ್ಕೊಡುವ ಸಮಾರಂಭವನ್ನೂ ನಡೆಸಿದೆವು. ಸಣ್ಣ ಫೋಟೊ ಸೆಷನ್ ಕೂಡ ನಡೆಯಿತು.

ಅಲ್ಲಿಂದ ಕೇರಳದ ಗಡಿಗೆ ಹೊಂದಿಕೊಂಡ ಅರಣ್ಯಕ್ಕೆ ಧಾವಿಸುವ ಬಯಕೆ ಮೂಡಿತು. ಜೀಪು ಅತ್ತ ಭರಗುಟ್ಟುತ್ತ ಸಾಗಿತು. ನಮ್ಮ ಚೆಂಗಪ್ಪ ಅವರಂತೂ ಜೀಪನ್ನು ಟಾರು ರಸ್ತೆಗಿಂತ ಸಲೀಸಾಗಿ ಕಾಡಲ್ಲಿ ಓಡಿಸುತ್ತಾರೆ. ಆದರೂ ಮುಂದೆ ಸಾಗೋದು ಅಷ್ಟು ಸುಲಭವಾಗಿರಲಿಲ್ಲ. ಮಧ್ಯದಲ್ಲಿ ಬಿದಿರಿನ ದೊಡ್ಡ ಪೊದೆಗಳು ದಾರಿಗೆ ಅಡ್ಡಲಾಗುತ್ತಿದ್ದವು. ಅದೆಷ್ಟು ಬಾರಿ ಜೀಪಿನಿಂದ ಕೆಳಗಿಳಿದು ದಾರಿಗೆ ಅಡ್ಡಲಾದುದೆಲ್ಲವನ್ನು ತೆರವುಗೊಳಿಸಿ ಮುಂದಕ್ಕೆ ಸಾಗುತ್ತಿದ್ದೆವು.

'ಏಯ್ ಸ್ಟಾಪ್...' ಎಂದು ಸತೀಶ್ ಸರ್ ಕೂಗಿಕೊಂಡರು. ಜೀಪು ತಕ್ಷಣಕ್ಕೆ ನಿಂತುಕೊಂಡಿತು. ಅವು ಸತೀಶ್ ಕಣ್ಣುಗಳು ಏನನ್ನಾದರೂ ಅರಸಿಯೇ ಇರುತ್ತವೆನ್ನುವುದು ಜೀಪಿಗೂ ಖಾತರಿ! ಅಂದುಕೊಂಡಂತೆ ಅವರಿಗೊಬ್ಬ ಕಾಡಿನ ವಿಶೇಷ ವ್ಯಕ್ತಿ ಕಣ್ಣಿಗೆ ಬಿದ್ದಿದ್ದ! ಒಂಚೂರೂ ತಡಮಾಡದೇ ನನ್ನ ನಿಕಾನ್ ಡಿ90 ಹೊರಕ್ಕೆ ತೆಗೆದು, ಲೆನ್ಸ್ (70-300ಎಂಎಂ) ಬದಲಾಯಿಸಿಕೊಂಡೆ. ಕ್ಯಾಪ್ಚರ್ ಮಾಡುತ್ತಲೇ ಹೋದೆ. ದಕ್ಕಿದ್ದು ಅಪರೂಪದ ಒಂದು ದೊಡ್ಡ ಗೂಬೆಯಂಥ ಪಕ್ಷಿ ಚಿತ್ರ.

ನಮ್ಮ ಪ್ರಯಾಣ ಕೊಂಚ ದೂರಕ್ಕೆ ಸಾಗಿತು. ಒಂದು ಜೀಪು ಬಿದಿರಿನ ದೊಡ್ಡ ಪೊದೆಗೆ ಅಪ್ಪಳಿಸಿತು. ಅದಕ್ಕೆ ಮುಂದೆ

(8ನೇ ಪುಟ ನೋಡಿ)